ಟಿ.ಎಂ. ಮಾನಪ್ಪ, ಶಿವಮೊಗ್ಗ

ಕಾಗೆಗೂ, ಮನುಷ್ಯನಿಗೂ ಇರುವ ವ್ಯತ್ಯಾಸವೇನು?



ಕಾಗೆಗಳು 'ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಎನ್ನುವುದನ್ನು ಒಗ್ಗಟ್ಟಿನಿಂದ ಆಚರಿಸುತ್ತಿವೆ.

ವಿ. ಹೇಮಂತಕುಮಾರ್, ಬೆಂಗಳೂರು

ಎದುರಲ್ಲು ನೀನೇ, ಎದೆಯಲ್ಲೂ ನೀನೇ ಎಂದು ಹಾಡ್ತಿರ್‍ತಾಳಲ್ಲಾ...?

ಅದು ನಿಮಗಲ್ಲ, ಅವರೆಕಾಯಿಗೆ ತಿಂದಮೇಲೂ ಎದೆಯಲ್ಲಿ ಒತ್ತುತ್ತಿರುತ್ತದಲ್ಲ.

ನಾರಾಯಣ ಯಾಜಿ, ಶಿರಾಲಿ

'ಮನುಜ ಶರೀರವಿದೇನು ಸುಖ' ಎಂದ ದಾಸವರೇಣ್ಯರೇ 'ಮಾನವ ಜನ್ಮ ದೊಡ್ಡದು' ಎಂದಿರುವ ದ್ವಂದ್ವವೇಕೆ?

ದ್ವಂದ್ವವೆಲ್ಲಿದೆ? ಕ್ರಮವಾಗಿ 'ದೇಹ ನಿಕೃಷ್ಟ', 'ಧ್ಯೇಯ ಉತ್ಕೃಷ್ಟ' ಎಂಬುದೇ ದಾಸವಾಣಿಯ ಅರ್ಥ.

ಕೆ.ಎಂ. ವಿಭೂತಿ, ಹರಿಹರ

ಕೊರೊನಾ ವಿಶ್ವಕ್ಕೆ ಬಂದಿರುವುದು ಕರ್ಮ ಸಿದ್ಧಾಂತದಿಂದಲೋ, ಧರ್ಮ ಸಿದ್ಧಾಂತದಿಂದಲೋ?



ಪೂರ್ವಕರ್ಮದ ಫಲ. ಚೀನಾ ಇರುವುದು ಭೂಗೋಳದ ಪೂರ್ವಾರ್ಧದಲ್ಲೇ.

ಎಚ್. ಆನಂದ್‌ಕುಮಾರ್, ಚಿತ್ರದುರ್ಗ

ಕೊರೊನಾ ಯಮನ ಎಷ್ಟನೆಯ ಸಂಶೋಧಿತ ಪ್ರತಿನಿಧಿ ಮಿಸ್ಟರ್ ರಾಮ್ ದೇವ್?

ಇದು ಕೊಳಕಿನಲ್ಲಿ ಹುಟ್ಟಿದ್ದರಿಂದ ಸಂಶೋಧಿತ ಅಲ್ಲ, ಸ್ಲಂ ಶೋಧಿತ.

ದೇವೇಂದ್ರ, ಕಡೂರು

ಸಿರಿವಂತರಿಗೇಕೆ ಸ್ನೇಹಿತರು ಬೇಗ ಸಿಗುತ್ತಾರೆ?

ಅವರ ಸಿರಿಯಂ ತರಿಯಲು.

ರಮೇಶ್, ಹನುಮನಾಳು

ಕನಸುಗಳು ಹಚ್ಚ ಹಸಿರಾಗಿರಲಿ ಅನ್ನುತ್ತಾರೆ. ಅವನ್ನು ಮಣ್ಣಿನಲ್ಲಿ ನೆಡಬೇಕಾ?

'ಮನದ ಇಳೆಯ ಹಸನು ಮಾಡಿ...' ಎನ್ನುತ್ತಾರೆ ರಾಜಶೇಖರ ಭೂಸನೂರಮಠ. ಕನಸಿಗೆ ಮನವೇ ಇಳೆ.

ಉಷಾ ಸೋಗಲ್, ತುರಹಳ್ಳಿ

ಭಾರ್ಯಾ ರೂಪವತೀ ಶತ್ರುಃ; ಗಂಡ ಸ್ಫುರದ್ರೂಪಿಯಾಗಿದ್ದರೆ?

ಕಾಡುಕುದುರೆ.

ಕಣ್ಣೂರು ಗೋವಿಂದಾಚಾರಿ, ಮೈಸೂರು

ಸಂಕಟ ಬಂದಾಗ ವೆಂಕಟರಮಣ; ಆದರೆ ಕೊರೊನಾ ಸಂಕಟ ಸಂದರ್ಭದಲ್ಲಿ ಅವನ ದರ್ಶನಕ್ಕೂ ಅವಕಾಶವಿಲ್ಲವಲ್ಲ?

ಇದೆಯಲ್ಲ! ಜಗ್ಗಂಡಿ ಪದಂಡಿಗಳ ಕಿರಿಕಿರಿಯಿಲ್ಲದೆ ಆನ್‌ಲೈನಲ್ಲಿ ಸೊಗಸಾಗಿ ನೋಡಬಹುದು.

ವಿ. ಭಾಗ್ಯಲಕ್ಷ್ಮಿ, ಮೈಸೂರು

ವಿದ್ಯೆಯ ಬಾಗಿಲು ತೆಗೆಯುವುದರ ಬದಲು ಮದ್ಯದ ಬಾಗಿಲು ತೆಗೆದ ಉದ್ದೇಶ?

ಬ್ರೈಟ್ ಆಗಬಯಸುವವರಿಗಿಂತ ಟೈಟ್ ಆಗಬಯಸುವವರ ಜನ ಜಾಸ್ತಿ ಇದ್ದಾರಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಶ್ರಮಜೀವಿ ಕತ್ತೆಯನ್ನು ಬೈಗುಳಕ್ಕೆ ಉದಾಹರಿಸುವುದು ಸರಿಯೇ ಸಾರ್?

ಅದರ ನುಡಿ ಚೆನ್ನಾಗಿಲ್ಲವಲ್ಲ. ಎಷ್ಟೇ ದುಡಿದರೂ ನುಡಿ ಸರಿಯಿಲ್ಲದಿದ್ದರೆ ಒಳ್ಳೆಯ ಹೆಸರು ದೊರಕದು.

ಎಚ್.ಕೆ. ವಿಜಯಕುಮಾರ್, ರಾಯಚೂರು

ಸತ್ತವರ ಫ್ಲೆಕ್ಸ್ ಬೋರ್ಡ್ ಮೇಲೆ ಮತ್ತೊಮ್ಮೆ ಹುಟ್ಟಿ ಬಾ ಎಂದು ಬರೆಯಲು ಕಾರಣ?

ಯಾರ್‍ಯಾರದೋ ಏನೇನೋ ಬಾಕಿ ಉಳಿಸಿ ಹೋಗಿರುತ್ತಾನಲ್ಲ!

ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ

ಬಡತನಕ್ಕೆ ಸುಣ್ಣ, ಬಡಿವಾರಕ್ಕೆ ಬಣ್ಣ ಎಂದರೇನು?

ಇಲ್ಲಿ ಕಟ್ಟಿದ ಸೊಲ್ಲು, ಅಲ್ಲಿ ಕಾಮನ ಬಿಲ್ಲು ಎಂದು.

## ಬಹುಮಾನಿತ ಪ್ರಶ್ನೆ

ಪೂರ್ಣಿಮಾ ಬೆಳವಾಡಿ, ಬೆಂಗಳೂರು

ಈರುಳ್ಳಿ ಕೊಳ್ಳುವ ಶಕ್ತಿ ಇಲ್ಲದಿದ್ದರೂ ಪಕೋಡ ತಿನ್ನುವ ಆಸೆ ಆಗುತ್ತಿದೆಯಲ್ಲಾ, ಏನು ಮಾಡಲಿ?

ಹೆಲ್ತ್ ಇನ್‌ಸ್ಪೆಕ್ಟರ ಸ್ನೇಹ ಬೆಳೆಸಿ ಇನ್‌ಸ್ಪೆಕ್ಷನ್‌ಗೆ ಜೊತೆ ಹೋಗಿ.

ದಿನೇಶ್, ಗುಡ್ಡದೂರು

ಪುಂಡನಿಗೂ, ಪುಢಾರಿಗೂ ವ್ಯತ್ಯಾಸವೇನು?

ಪುಂಡ ಸಸಿ, ಪುಢಾರಿ ಮರ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

ಅತಿ ಸುಂದರ ಹುಡುಗಿಯನ್ನು ದೇವರು ಕೂಡಾ ತಿರುಗಿ ನೋಡಲು ಕಾರಣ?

ತನ್ನ ಪ್ರಾಡಕ್ಟ್ ಬಗ್ಗೆ ಇರುವ ಹೆಮ್ಮೆ.

ಬಾ.ರಂ. ಸುರೇಶ್, ಶಿವಮೊಗ್ಗ

ನಾನು ಸೈಲೆಂಟ್ ಆಗಿದ್ದರೂ ನನ್ನವಳು ಕಾರಣ ವಿಲ್ಲದೆ ಜಗಳ ತೆಗೆದು ಮನ ನೋಯಿಸುತ್ತಾಳಲ್ಲಾ...?



'ತಪ್ಪು ಮಾಡಿದವರು ಸೈಲೆಂಟ್ ಆಗಿರ್‍ತಾರೆ' ಎನ್ನುವುದು ಆಕೆಯ ನಂಬಿಕೆಯಂತೆ. ಕೊಂಚ ಸದ್ದು ಮಾಡುತ್ತಿರಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ನಮ್ಮ ಮಾತು ಹೇಗಿರಬೇಕು ಸಾರ್?

ಅರ್ಥವಾಗುವಂತೆ, ಅನರ್ಥವಾಗದಂತೆ.

ಬಿ. ಶ್ರೀನಾಥ, ಮೈಸೂರು

ನೋವು–ನಲಿವು ಸ್ನೇಹಿತರೋ, ದಾಯಾದಿಗಳೋ?

ಸ್ಪರ್ಧಿಗಳು.

ರವೀಂದ್ರ, ಬೆಂಗಳೂರು

ಕೃಷ್ಣ ಪರಮಾತ್ಮ ಕುರುಕ್ಷೇತ್ರ ಯುದ್ಧ ಬಿಟ್ಟು ಕ್ರಿಕೆಟ್ ಏರ್ಪಡಿಸಿದ್ದಿದ್ರೆ?

ಭೀಮನ ಬೌನ್ಸರ್‌ಗೆ ತಲೆಯೊಡೆದು, ಅರ್ಜುನನ ಯಾರ್ಕರ್‌ಗೆ ಬೌಲ್ಡಾಗಿ ಕೌರವರು ಆಲೌಟ್ ಆಗುತ್ತಿದ್ದರು.

■ **ರಾಮ್**

ಪ್ರಶ್ನೆ ಕಳುಹಿಸಲು: **editorsu@sudha.co.in**